

ಎಡದಿಂದ ಬಲಕ್ಕೆ :

1. ಸಂಪತ್ತು ಕಮ್ಮಿಯಾಯಿತೆಂದು ಭಾರೀ ದುಃಖ (3)
3. ಶೂರರಿಗಷ್ಟೇ ಸರಿ, ನೆಲ ಕೊರೆದ ಈ ಹಾದಿ (3)
4. ನಿಯಮಕ್ಕೆ ತಕ್ಕಂತೆಯೇ ನಡೆಯಬೇಕೆಂದು ಕಟ್ಟಪ್ಪಣೆಯಾಗಿದೆ (3)
6. ಬಿಸಿಲನ್ನು ಬಳಕೆಗೆ ತರುವ ಕ್ರಮವನ್ನು ಸರಳಗೊಳಿಸು (4)
7. ಸುಂದರ ಮೂಗುತಿಯನ್ನು ಮುರಿದದ್ದು ಕುಚೇಷ್ಟೆ (4)
9. ಗೋಧಿಯನ್ನೇ ಬೆಳೆವ ತೀರ್ಮಾನ ಅನಿಶ್ಚಿತವಾಗಿದೆ (4)
11. ಗಾವಿಲನೂ ಸವಿಯಬಲ್ಲಂಥ ಮಧುರ ಹಾಡು (4)
15. ಮರೆತಿದ್ದನ್ನೆಲ್ಲ ನೆನಪಿಸಿದರೆ ಭಾರೀ ಗೊಂದಲವಾದೀತು (3)
16. ತಿಗಣೆ ಕಾಟಕ್ಕೆ ಸಿಲುಕಿರುವ ಮನೆಗಳ ಎಣಿಕೆ (3)
17. ಕಾದಿರಿಸಿರುವ ವಸ್ತು ಕಪ್ಪು ಬಣ್ಣದ್ದು (3)

ಮೇಲಿಂದ ಕೆಳಕ್ಕೆ :

1. ಸ್ವಾಗತಕಾರರನ್ನು ಆಯ್ಕೆ ಮಾಡುವ ವಿಷಯ ಏನು ? (3)
2. ಪತ್ರಿಕೆಗಳಲ್ಲೆಲ್ಲ ಅಚ್ಚಾಗಿರುವುದು ಒಂದೇ ಬಾವುಟ (3)
3. ಸಭಿಕರನ್ನೆಲ್ಲ ಆಕರ್ಷಿಸಿದ ಸುವಾಸನೆ ಹೇಗೆ ? (3)
4. ತೂಗು ಹಾಕಿದ್ದನ್ನು ಹಾಡ ಹಗಲಲ್ಲೇ ಕದ್ದ ಕಳ್ಳ ಗೊತ್ತೇ ? (3)
6. ಮುನಿಸನ್ನು ದೂರ ಮಾಡಿದರೆ ಮಾತ್ರ ಸದಾ ಸಂತಸ (3)
8. ಮನೆಗೆ ಬಂದವರನ್ನು ಗೌರವಿಸಲು ವಂದನೆ (3)
10. ತುರಗದ ಶ್ರೇಷ್ಠತೆಯನ್ನು ಸೂಚಿಸುವ ಚಿನ್ಹೆ ಏನು ? (3)
12. ಇದು ವಿನೂತನ ರೀತಿಯ ಕೋರಿಕೆ (3)
13. ಭಲ್ಲೂಕವನ್ನು ಹೆದರಿಸಿ ಹಿಮ್ಮೆಟ್ಟಿಸಿದವ ಈ ಹುಡುಗ (3)
14. ಗೆದ್ದವನು ಪಡೆದ ಬಹುಮಾನ ಬರೀ ರೊಕ್ಕ (3)

## 17-11-2016ರ ಉತ್ತರಗಳು

ಎಡದಿಂದ ಬಲಕ್ಕೆ:

1. ವಿಧ ವಿಧ 3. ವಿನಾಶ 4. ನಿರ್ಮಿಸು 6.ದಮನಕ 7. ನಿರಂತರ 9. ವನಸ್ಪತಿ 11. ದಣಾಯಕ 13. ನವರಸ 15. ದಾವಾನಲ 17. ನಳಿನ 18. ಲಾವಣ್ಯ 19. ವಟವಟ

ಮೇಲಿಂದ ಕೆಳಕ್ಕೆ:

1. ವಿಶದ 2. ಧನಿಕ 3. ವಿಧಾತ 5. ಸುಮನ 7. ನಿನಾದ 8. ರಜಕ 9. ವದನ 10. ತಿಮ್ಮಸ (= ಸಮ್ಮತಿ ಬುಡಮೇಲು) 12. ಯಜನ 14. ವರೇಣ್ಯ 15. ದಾನವ 16. ಲಲಾಟ

# ಪ್ರಶ್ನಾಂಕಣ

## ಬಾವಲಿ: ಎಷ್ಟು ವಿಧ? ಎಷ್ಟು ಪ್ರಭೇದ ?

ಬಾವಲಿ ಅದು ಸಸ್ತನಿ ವರ್ಗದ ಒಂದು ಸುಪ್ರಸಿದ್ಧ ಪ್ರಾಣಿ. 'ಹಕ್ಕಿಗಳಂತೆ ಹಾರಾಡಬಲ್ಲ ಏಕೈಕ ಸಸ್ತನಿ' ಎಂಬ ವಿಶಿಷ್ಟ ವಿಶ್ವ ದಾಖಲೆ ಅದರದು. ಶೀತಲ ಆರ್ಕ್ಟಿಕ್ ಪ್ರದೇಶ ಮತ್ತು ಅಂಟಾರ್ಕ್ಟಿಕಾಗಳನ್ನು ಬಿಟ್ಟು ಧರೆಯ ಇನ್ನೆಲ್ಲ ನೆಲಾವಾರಗಳಲ್ಲೂ ಬಾವಲಿಗಳು ನೆಲೆಸಿವೆ. ಸಮೀಪ 53 ದಶಲಕ್ಷ ವರ್ಷಗಳಿಂದ ಪೃಥ್ವಿಯಲ್ಲಿರುವ ಬಾವಲಿಗಳದೇ ಸ್ತನಿ ವರ್ಗದಲ್ಲಿ ಗರಿಷ್ಠ ವೈವಿಧ್ಯ ಕೂಡ. ಮನುಷ್ಯರ ಏಕೈಕ ಪ್ರಭೇದವೂ ಸೇರಿ ಒಟ್ಟು 5500 ಪ್ರಭೇದಗಳಿರುವ ಸ್ತನಿ ವರ್ಗದಲ್ಲಿ ಬಾವಲಿಗಳದೇ ಶೇಕಡ 20 ಭಾಗ ! ಹಾಗೆಂದರೆ ಈವರೆಗೆ ಗುರುತಿಸಲ್ಪಟ್ಟಿರುವ ಬಾವಲಿ ಪ್ರಭೇದಗಳ ಸಂಖ್ಯೆ 1100 ಎಂಬುದು ಸ್ಪಷ್ಟ ತಾನೇ ? (ಕೆಲವು ಪ್ರಭೇದಗಳನ್ನು ಚಿತ್ರಗಳಲ್ಲಿ ಗಮನಿಸಿ)

ಬಾವಲಿಗಳ ಇಷ್ಟೂ ಪ್ರಭೇದಗಳನ್ನು ಒಟ್ಟಾಗಿ 'ಕೈರಾಪ್ಟೆರಾ' ಎಂದು ವರ್ಗೀಕರಿಸಲಾಗಿದೆ. ಈ ಇಡೀ ವರ್ಗವನ್ನು ಎರಡು ಉಪವರ್ಗಗಳನ್ನಾಗಿ ವಿಂಗಡಿಸಲಾಗಿದೆ : "ಮೆಗಾ ಕೈರಾಪ್ಟೆರಾ ( ದೊಡ್ಡ ಬಾವಲಿಗಳು) ಮತ್ತು ಮೈಕ್ರೋ ಕೈರಾಪ್ಟೆರಾ (ಚಿಕ್ಕ ಬಾವಲಿಗಳು)". ಈ ಎರಡೂ ವಿಧಗಳ ನಡುವಣ ಪ್ರಧಾನ ಅಂತರಗಳು ತುಂಬ ಕುತೂಹಲಕರ :

* ಹೆಸರೇ ಸೂಚಿಸುವಂತೆ ಮೆಗಾ ಕೈರಾಪ್ಟೆರಾ ವಿಧದ ಎಲ್ಲ ಬಾವಲಿಗಳದೂ ದೊಡ್ಡ ಶರೀರ. ಈ ಗುಂಪಿನ ಅತ್ಯಂತ ದೊಡ್ಡ 'ಗೋಲ್ಡನ್ ಕ್ರೌನ್ಡ್ ಫ್ಲೈಯಿಂಗ್ ಫಾಕ್ಸ್' (ಬಂಗಾರ ಕಿರೀಟದ ಹಾರುವ ನರಿ) ಬಾವಲಿಯದು ಆರು ಅಡಿಯಷ್ಟು ಬೃಹತ್ ರೆಕ್ಕೆ ವಿಸ್ತಾರ ; ಒಂದೂವರೆ ಕಿಲೋಗ್ರಾಂ ಗೂ ಅಧಿಕ ತೂಕ ! ತದ್ವಿರುದ್ಧವಾಗಿ ಮೈಕ್ರೋ ಕೈರಾಪ್ಟೆರಾ ವಿಧದ ಬಾವಲಿಗಳೆಲ್ಲ ವಾಮನ ಮೂರ್ತಿಗಳು. ಈ ಗುಂಪಿನ ಅತ್ಯಂತ ಚಿಕ್ಕ ಗಾತ್ರದ ಬಾವಲಿ 'ಕಿಟ್ಟೀಸ್ ಹಾಗ್ ನೋಸ್ಡ್ ಬ್ಯಾಟ್' (ಹಂದಿ ಮೂಗಿನ ಬಾವಲಿ) ನ ಉದ್ದ ಒಂದೇ ಒಂದು ಅಂಗುಲ ! ತೂಕ ಕೇವಲ ಎರಡೂವರೆ ಗ್ರಾಂ ! ಇಡೀ ಸಸ್ತನಿವರ್ಗದಲ್ಲೇ ಅತ್ಯಂತ ಚಿಕ್ಕ ಗಾತ್ರದ ಪ್ರಾಣಿ ಇದೇ.

* ಎಲ್ಲ ಬಾವಲಿಗಳೂ ನಿಶಾಚರರೇ ಆದರೂ ಮೆಗಾ ಕೈರಾಪ್ಟೆರಾ ಬಾವಲಿಗಳಿಗೆ ಅತ್ಯುತ್ತಮ ದೃಷ್ಟಿಶಕ್ತಿ ಇದೆ; ಮನುಷ್ಯರಷ್ಟೇ ಸೂಕ್ಷ್ಮ ದೃಷ್ಟಿ ಸಾಮರ್ಥ್ಯ ಇದೆ. ಹಾರಾಡಲು, ಆಹಾರ ಹುಡುಕಲು, ಶತ್ರುಗಳಿಂದ ತಪ್ಪಿಸಿಕೊಳ್ಳಲು ... ಎಲ್ಲಕ್ಕೂ ಅವು ದೃಷ್ಟಿಯನ್ನೇ ಬಳಸುತ್ತವೆ. ಅದಕ್ಕೆ ವಿರುದ್ಧವಾಗಿ ಮೈಕ್ರೋ ಕೈರಾಪ್ಟೆರಾಗಳದು ತೀರ ಮಬ್ಬು ದೃಷ್ಟಿ. ಆದ್ದರಿಂದಲೇ ಅವು ಎಲ್ಲ ಚಟುವಟಿಕೆಗಳಿಗೂ ಅತ್ಯಂತ ಸಮರ್ಥವಾದ ಶಬ್ದಾಧಾರಿತ 'ಸೋನಾರ್' ವ್ಯವಸ್ಥೆಯನ್ನು ಪಡೆದಿವೆ ; 'ಎಕೋ ಲೊಕೇಶನ್' ತಂತ್ರವನ್ನು ಬಳಸುತ್ತವೆ.




* ಮೆಗಾ ಕೈರಾಪೆರಾಗಳ ಪ್ರಮುಖ ಆಹಾರ ಹಣ್ಣುಗಳು, ಹೂಗಳ ಮಕರಂದ ಮತ್ತು ಪರಾಗ. ಹಾಗಾಗಿ ಸಸ್ಯಗಳ ಪರಾಗ ಸ್ಪರ್ಶ ಮತ್ತು ಬೀಜ ಪ್ರಸಾರದಲ್ಲಿ ಅವುಗಳದು ಮಹತ್ತರ ಪಾತ್ರ. ಮೈಕೋ ಕೈರಾಪ್ಟೆರಾಗಳಿಗೆ ಸೊಳ್ಳೆ, ಮಿಡತೆ, ಪತಂಗ ಇತ್ಯಾದಿ ಕೀಟಗಳೇ ಆಹಾರ. ಹಾಗಾಗಿ 'ಪಿಡುಗು ನಿವಾರಕಗಳು' ಎಂದೂ ಅವು ಪ್ರಸಿದ್ಧ. ಕೆಲವು ಬಾವಲಿ ಪ್ರಭೇದಗಳು ಮೀನು, ಕಪ್ಪೆ, ಹಲ್ಲಿ ಇತ್ಯಾದಿ ಪುಟ್ಟ ಪ್ರಾಣಿಗಳನ್ನೂ ಬೇಟೆಯಾಡುತ್ತವೆ. ಮೂರು ಪ್ರಭೇದಗಳು ಮಾತ್ರ ಅವೇ 'ವ್ಯಾಂಪೈರ್ ಬಾವಲಿಗಳು' ಪ್ರಾಣಿಗಳ ರಕ್ತವನ್ನೇ ಆಹಾರವನ್ನಾಗಿ ಹೀರುತ್ತವೆ.

■ ಎನ್. ವಾಸುದೇವ್